# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 389
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ. ನಮೋಶಿ
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 11.12.2024

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರದ ವಿವಿಧ ಸಾರಿಗೆ ನಿಗಮಗಳಲ್ಲಿ ಆದಾಯವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**<br><br>ಕ.ರಾ.ರ.ಸಾ.ನಿಗಮದಲ್ಲಿ ಸಾರ್ವಜನಿಕರ ಸುಗಮ ಪ್ರಯಾಣಕ್ಕೆ ಉತ್ತಮ ಬಸ್ ಸೌಕರ್ಯವನ್ನು ಒದಗಿಸಿ ಆದಾಯವನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳ ವಿವರಗಳನ್ನು **ಅನುಬಂಧ-ಅ** ರಲ್ಲಿ ನೀಡಲಾಗಿದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ**<br><br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು, ಸಾರ್ವಜನಿಕ ಸೇವಾ ಸಂಸ್ಥೆಯಾಗಿದ್ದು, ಬೆಂಗಳೂರು ನಗರ ಹಾಗೂ ಹೊರ ವಲಯದ ಸಾರ್ವಜನಿಕ ಪ್ರಯಾಣಿಕರಿಗೆ ಉತ್ತಮ, ಸುಲಭ, ಸುರಕ್ಷಿತ ಸಾರಿಗೆ ಸೇವೆಯನ್ನು ಒದಗಿಸಲು ನಿರಂತರವಾಗಿ ಶ್ರಮಿಸುತ್ತಿದೆ.<br><br>ಪ್ರತಿದಿನ ಹವಾನಿಯಂತ್ರಿತ ಸಾರಿಗೆಗಳನ್ನು ಒಳಗೊಂಡಂತೆ 5,808 ಅನುಸೂಚಿಗಳನ್ನು 60,754 ಸುತ್ತುವಳಿಗಳೊಂದಿಗೆ 11.93 ಲಕ್ಷ ಕಿ.ಮೀ.ಗಳಲ್ಲಿ ಬೆಂಗಳೂರು ನಗರ ಹಾಗೂ ಹೊರವಲಯದ ಪ್ರಯಾಣಿಕರ ದಟ್ಟಣೆ/ ಅವಶ್ಯಕತೆಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿದ್ದು, ಸರಾಸರಿ 40 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಿದ್ದಾರೆ.<br><br>ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸಿ, ಸಾರಿಗೆ ಸೇವೆಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.<br><br>ಆಗಿಂದಾಗ್ಗೆ, ಪ್ರಯಾಣಿಕರ ಬೇಡಿಕೆ ಮತ್ತು ಅವಶ್ಯಕತೆಗನುಗುಣವಾಗಿ ಅನುಸೂಚಿಗಳ ಪರಿಷ್ಕರಣೆ/ವಿಸ್ತರಣೆ/ ರದ್ದತಿಗೊಳಿಸಲಾಗುತ್ತಿದೆ.<br><br>ಮೆಟ್ರೋ ರೈಲು ಪ್ರಯಾಣಿಕರಿಗೆ ಮೆಟ್ರೋ ರೈಲು ನಿಲ್ದಾಣದಿಂದ ವಾಸಸ್ಥಳಗಳಿಗೆ ತಲುಪಲು (first and last mile connectivity) ಒಟ್ಟು 51 ಮಾರ್ಗಗಳಲ್ಲಿ 190 ಅನುಸೂಚಿಗಳನ್ನು 2500 ಮೆಟ್ರೋ ಫೀಡರ್ ಸೇವೆಗಳನ್ನು ಆಚರಣೆಗೊಳಿಸಲಾಗುತ್ತಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
| --- | --- | --- |
| | | ಪ್ರವಾಸಿಗರ ಅನುಕೂಲಕ್ಕಾಗಿ ವಾರಾಂತ್ಯ ಹಾಗೂ ರಜಾ ದಿನಗಳಲ್ಲಿ ಈಶಾ ಫೌಂಡೇಷನ್ ಟೂರ್ ಪ್ಯಾಕೇಜ್ ಹಾಗೂ ಬೆಂಗಳೂರು ರೌಂಡ್ಸ್ ಸಾರಿಗೆಗಳನ್ನು ಪ್ರಾರಂಭಿಸಲಾಗಿದೆ.<br><br>ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ಕೆಳಕಂಡಂತೆ ಕ್ರಮ ವಹಿಸಲಾಗಿದೆ.<br><br>• ಬಸ್ಸು/ಮಾರ್ಗಗಳ ವೇಳಾಪಟ್ಟಿ ಹಾಗೂ ಬಸ್ಸುಗಳ Live Tracking ಮಾಹಿತಿ ಲಭ್ಯವಾಗುವಂತೆ Mobile App ಅನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಬಸ್ ನಿಲುಗಡೆಗಳಲ್ಲಿ PIS Board ಗಳನ್ನು Install ಮಾಡಲಾಗಿದೆ.<br>• ಮಹಿಳಾ ಪ್ರಯಾಣಿಕರ ಸುರಕ್ಷತೆಗಾಗಿ ಬಸ್ಸುಗಳಲ್ಲಿ ಪ್ಯಾನಿಕ್ ಬಟನ್ ಸಿಸಿಟಿವಿ ಕಣ್ಗಾವಲು ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ.<br>• UPI Payment ಹಾಗೂ Digital Pass ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.<br>• ಮಾಸಿಕ, ದಿನದ ಹಾಗೂ ವಾರದ ಪಾಸುಗಳನ್ನು ವಿತರಿಸಲಾಗುತ್ತಿದೆ.<br>• ಹವಾನಿಯಂತ್ರಿತ ವಜ್ರ ಸೇವೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ದಿನಾಂಕ:01-01-2021 ರಿಂದ ಶೇ.21 ರಷ್ಟು ಪ್ರಯಾಣ ದರಗಳನ್ನು ಕಡಿಮೆಗೊಳಿಸಿ ಪರಿಷ್ಕರಿಸಲಾಗಿದೆ.<br>• ವಜ್ರ ಸಾರಿಗೆಯ ಮಾಸಿಕ ಪಾಸಿನ ದರ ರೂ.2363/- ರಿಂದ ರೂ.1800/- ಹಾಗೂ ದಿನದ ಪಾಸಿನ ದರ ರೂ.147/- ರಿಂದ ರೂ.120/- ಕ್ಕೆ ಕಡಿಮೆಗೊಳಿಸಿ ಪರಿಷ್ಕರಿಸಲಾಗಿದೆ.<br>• ಹವಾನಿಯಂತ್ರಿತ ವಜ್ರ ಸೇವೆಗಳಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರನ್ನು ಆಕರ್ಷಿಸಲು ದಿನಾಂಕ: 17-12-2021 ರಿಂದ ಶೇ.34.36 ರಷ್ಟು ಪ್ರಯಾಣದರಗಳನ್ನು ಕಡಿಮೆಗೊಳಿಸಿ ಪರಿಷ್ಕರಿಸಲಾಗಿದೆ.<br>• ಸಾಮಾನ್ಯ ಮಾಸಿಕ ಪಾಸುದಾರರು ಹಾಗೂ ಹಿರಿಯ ನಾಗರಿಕ ಮಾಸಿಕ ಪಾಸುದಾರರು ವಜ್ರ ಸೇವೆಗಳಲ್ಲಿ ಪ್ರಯಾಣಿಸಲು ಪ್ರತಿ ಸುತ್ತುವಳಿಗಳ ಟಿಕೇಟ್ ದರ ರೂ.25/- ಕ್ಕೆ ನಿಗದಿಪಡಿಸಿದೆ. |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ<br><br>ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಆದಾಯವನ್ನು ಹೆಚ್ಚಿಸಲು ಕೈಗೊಂಡ ಕ್ರಮಗಳ ವಿವರಗಳನ್ನು ಅನುಬಂಧ-ಆ ರಲ್ಲಿ ನೀಡಲಾಗಿದೆ.<br><br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ<br><br>ನಿಗಮದ ಆದಾಯವನ್ನು ಹೆಚ್ಚಿಸಲು ಕೈಗೊಂಡ ವಿವರವನ್ನು ಅನುಬಂಧ -'ಇ' ರಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ಕಳೆದ ಒಂದು ವರ್ಷದಲ್ಲಿ ವಿವಿಧ ಸಾರಿಗೆ ನಿಗಮಗಳಿಗೆ ಬಂದ ಒಟ್ಟು ಆದಾಯ ಎಷ್ಟು;</td><td><table>
<tr><th>ಸಂಸ್ಥೆ</th><th>ವರ್ಷ</th><th>ಆದಾಯ (ಲಕ್ಷಗಳಲ್ಲಿ)</th></tr>
<tr><td>ಕ.ರಾ.ರ.ಸಾ.ನಿಗಮ</td><td>2023-2024</td><td>4,54,440.88</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>2023-2024</td><td>2,61,379.98</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>2023-2024</td><td>2,37,281.00</td></tr>
<tr><td>ಕ.ಕ.ರ.ಸಾ.ನಿಗಮ</td><td>2023-2024</td><td>2,29,185.00</td></tr>
<tr><td>ಒಟ್ಟು</td><td></td><td>11,82,286.86</td></tr>
</table></td></tr>
<tr><td>ಇ</td><td>"ನಮ್ಮ ಕಾರ್ಗೋ" ಯೋಜನೆಯಿಂದ ಕಳೆದ ಒಂದು ವರ್ಷದಲ್ಲಿ ಸಂಗ್ರಹವಾದ ಆದಾಯ ಎಷ್ಟು;</td><td><table>
<tr><th>ಸಂಸ್ಥೆ</th><th>ವರ್ಷ</th><th>ಆದಾಯ ಲಕ್ಷಗಳಲ್ಲಿ</th></tr>
<tr><td>ಕ.ರಾ.ರ.ಸಾ.ನಿಗಮ</td><td>2023-2024</td><td>756.42</td></tr>
<tr><td>ಬೆಂ.ಮ.ಸಾ.ಸಂಸ್ಥೆ</td><td>2023-2024</td><td>-</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td>2023-2024</td><td>320.00</td></tr>
<tr><td>ಕ.ಕ.ರ.ಸಾ.ನಿಗಮ</td><td>2023-2024</td><td>325.00</td></tr>
<tr><td>ಒಟ್ಟು</td><td></td><td>1401.42</td></tr>
</table></td></tr>
<tr><td>ಈ</td><td>"ನಮ್ಮ ಕಾರ್ಗೋ" ಯೋಜನೆಯು ಪ್ರಸ್ತುತ ರಾಜ್ಯದ ಯಾವ ಯಾವ ನಗರಗಳ ಮಧ್ಯ ಜಾರಿಯಲ್ಲಿದೆ;</td><td>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ<br><br>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ 56 ಜಿಲ್ಲಾ ಸ್ಥಳಗಳಲ್ಲಿ, 97 ತಾಲ್ಲೂಕ/ಸ್ಥಳೀಯ ಸ್ಥಳಗಳಲ್ಲಿ ಹಾಗೂ 53 ಅಂತರರಾಜ್ಯದ ಸ್ಥಳಗಳಲ್ಲಿ ಒಟ್ಟು 206 ಪಾರ್ಸಲ್ ಕೌಂಟರ್‌ಗಳನ್ನು ಪ್ರಾರಂಭಿಸಲಾಗಿರುತ್ತದೆ.<br><br>"ನಮ್ಮ ಕಾರ್ಗೋ" ನಡೆಸುತ್ತಿದ್ದ ಬಿಸಿನೆಸ್ ಫೆಸಿಲಿಟೇಟರ್ ರವರ ಕಾರ್ಯ ವೈಖರಿಯಲ್ಲಿ ನ್ಯೂನ್ಯತೆಗಳು ಕಂಡುಬಂದ ಕಾರಣ ಪ್ರಸ್ತುತ ನಮ್ಮ ಕಾರ್ಗೋ ಸೇವೆಯನ್ನು ದಿನಾಂಕ:23.11.2024 ರಿಂದ</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಸ್ಥಗಿತಗೊಳಿಸಲಾಗಿರುತ್ತದೆ. ಸದರಿ ಸೇವೆಯನ್ನು ನಿಗಮದ ಸಿಬ್ಬಂದಿಗಳ ವತಿಯಿಂದ ನಿರ್ವಹಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ**<br><br>ವಾ.ಕ.ರ.ಸಾ.ಸಂಸ್ಥೆಯ ವ್ಯಾಪ್ತಿಯಲ್ಲಿ ಒಟ್ಟು 40 ಬಸ್ ನಿಲ್ದಾಣಗಳಲ್ಲಿ ಕಾರ್ಗೋ ಸೇವೆ ನೀಡಲಾಗಿತ್ತು. ವಿವರವನ್ನು **ಅನುಬಂಧ-ಈ** ರಲ್ಲಿ ನೀಡಲಾಗಿದೆ.<br><br>"ನಮ್ಮ ಕಾರ್ಗೋ" ನಡೆಸುತ್ತಿದ್ದ ಬಿಸಿನೆಸ್ ಫೆಸಿಲಿಟೇಟರ್ ರವರ ಕಾರ್ಯ ವೈಖರಿಯಲ್ಲಿ ನ್ಯೂನ್ಯತೆಗಳು ಕಂಡುಬಂದ ಕಾರಣ ಪ್ರಸ್ತುತ ನಮ್ಮ ಕಾರ್ಗೋ ಸೇವೆಯನ್ನು ದಿನಾಂಕ.23.11.2024 ರಿಂದ ಸ್ಥಗಿತಗೊಳಿಸಲಾಗಿರುತ್ತದೆ. ಸದರಿ ಸೇವೆಯನ್ನು ನಿಗಮದ ಸಿಬ್ಬಂದಿಗಳ ವತಿಯಿಂದ ನಿರ್ವಹಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ**<br><br>ಕ.ಕ.ರ.ಸಾ. ನಿಗಮದ 33 ಕೌಂಟರ್‌ಗಳಲ್ಲಿ "ನಮ್ಮ ಕಾರ್ಗೋ" ಸೇವೆಯ ಯೋಜನೆಯು ಈ ಹಿಂದೆ ಇದ್ದು, ಪ್ರಸುತ್ತ ಈ ಯೋಜನೆಯನ್ನು ದಿನಾಂಕ :23.11.24ರಿಂದ ರದ್ದು ಪಡಿಸಲಾಗಿರುತ್ತದೆ. ಕ.ಕ.ರ.ಸಾ.ನಿಗಮದ ವ್ಯಾಪ್ತಿಯಲ್ಲಿದ್ದ ಕೌಂಟರ್‌ಗಳ ಪಟ್ಟಿಯನ್ನು **ಅನುಬಂಧ -ಉ** ರಲ್ಲಿ ನೀಡಲಾಗಿದೆ. |
| ಉ) | ಪ್ರಸ್ತುತ ರಾಜ್ಯದಲ್ಲಿರುವ ಖಾಸಗಿ ಕೋರಿಯರ್ ಕಂಪನಿಗಳು ಎಷ್ಟು; ಅವುಗಳಿಂದ ಕಳೆದ ಒಂದು ವರ್ಷದಲ್ಲಿ ಸಂಗ್ರಹವಾದ ಆದಾಯ ಎಷ್ಟು? | ಅನ್ವಯಿಸುವುದಿಲ್ಲ. |

ಸಂಖ್ಯೆ: ಟಿಡಿ 210 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು

**ಕ.ರಾ.ರ.ಸಾ.ನಿಗಮ**

1. ಕ.ರಾ.ರ.ಸಾ.ನಿಗಮದ ವತಿಯಿಂದ ಸಾಮಾನ್ಯ, ನಗರ ಮತ್ತು ವೇಗದೂತ ಸಾರಿಗೆಗಳಲ್ಲದೆ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಅಶ್ವಮೇಧ ಕ್ಲಾಸಿಕ್, ರಾಜಹಂಸ, ಐರಾವತ, ಎ.ಸಿ ಸ್ಲೀಪರ್, ನಾನ್ ಎಸಿ ಸ್ಲೀಪರ್, ಪಲ್ಲಕ್ಕಿ, ಐರಾವತ ಕ್ಲಬ್‌ಕ್ಲಾಸ್, ಫ್ಲೈ-ಬಸ್, ಅಂಬಾರಿ ಡ್ರೀಮ್‌ಕ್ಲಾಸ್, ಅಂಬಾರಿ ಉತ್ಸವ, ಇವಿ ಪವರ್ ಪ್ಲಸ್ ಮುಂತಾದ ಪ್ರತಿಷ್ಠಿತ ಸಾರಿಗೆಗಳನ್ನು ಕಾರ್ಯಾಚರಿಸಿ ರಾಜ್ಯದ ಹಾಗೂ ನೆರೆ ರಾಜ್ಯದ ಪ್ರಮುಖ ಸ್ಥಳಗಳಿಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

2. ನಿಗಮವು ಒಟ್ಟು 14 ನಗರಗಳಲ್ಲಿ ಅಂದರೆ ತುಮಕೂರು, ಮೈಸೂರು, ಹಾಸನ, ಮಂಡ್ಯ, ರಾಮನಗರ, ಮಂಗಳೂರು, ಉಡುಪಿ, ಕೋಲಾರ, ಕೆ.ಜಿ.ಎಫ್., ದಾವಣಗೆರೆ, ಶಿವಮೊಗ್ಗ, ಭದ್ರಾವತಿ, ಚಿತ್ರದುರ್ಗ, ಮತ್ತು ಚಿಕ್ಕಮಗಳೂರು ನಗರಗಳಲ್ಲಿ ನಗರ ಸಾರಿಗೆಗಳನ್ನು ನಗರ ಮತ್ತು ಹೊರವಲಯಗಳಲ್ಲಿ ಕಾರ್ಯಾಚರಣೆ ಮಾಡಲಾಗುತ್ತಿದೆ.
3. ಕ.ರಾ.ರ.ಸಾ ನಿಗಮವು ಟಿಕೆಟ್ ವಿತರಣೆಯಲ್ಲಿ ಸರಳತೆ ಹಾಗೂ ಪಾರದರ್ಶಕತೆ ತರುವ ನಿಟ್ಟಿನಲ್ಲಿ ಇ.ಟಿ.ಎಂ (Electronic Ticketing Machine)ಜಾರಿಗೆ ತಂದಿರುತ್ತದೆ.
4. ಇ.ಟಿ.ಎಂ. ಯಂತ್ರಗಳಿಂದ ವಿತರಿಸುವ ಟಿಕೆಟುಗಳಿಗೆ UPI ಮೂಲಕ ಹಣ ಪಾವತಿಸುವ ವ್ಯವಸ್ಥೆ ಕಲ್ಪಿಸಲಾಗಿದೆ.
5. ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೈಸೂರು, ಮಂಗಳೂರು-ಉಡುಪಿ-ಕುಂದಾಪುರ, ಕುಶಾಲನಗರ-ಮಡಿಕೇರಿಗೆ ನೇರ ಸಂಪರ್ಕ ಕಲ್ಪಿಸಲು "Fly bus" ಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.
6. ಸಾರ್ವಜನಿಕ ಪ್ರಯಾಣಿಕರಿಗೆ ಮುಂಗಡವಾಗಿ ಆಸನಗಳನ್ನು ಕಾಯ್ದಿರಿಸುವ ಅನುಕೂಲಕ್ಕಾಗಿ ನಿಗಮವು ಅವತಾರ್ (ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಟಿಕೆಟು ಕಾಯ್ದಿರಿಸುವಿಕೆ) ಗಣಕೀಕೃತ ಮುಂಗಡ ಬುಕಿಂಗ್ ಯೋಜನೆ ಜಾರಿಗೊಳಿಸಿದ್ದು, ರಾಜ್ಯದ ಹಾಗೂ ಹೊರ ರಾಜ್ಯಗಳ ಪ್ರಮುಖ ಸ್ಥಳಗಳಲ್ಲಿ ನಿಗಮದ ಕೌಂಟರುಗಳು/ಖಾಸಗಿ ಬುಕಿಂಗ್ ಏಜೆಂಟರುಗಳ ಮೂಲಕ ಮುಂಗಡ ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
7. ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಗುಂಪಾಗಿ (ಅಂದರೆ ನಾಲ್ಕು ಜನ ಮತ್ತು ಅದಕ್ಕೆ ಮೇಲ್ಪಟ್ಟು) ಕಾಯ್ದಿರಿಸಿದಲ್ಲಿ ಶೇ.5 ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ ಹಾಗೂ ಮುಂಗಡ ಆಸನವನ್ನು ಹೋಗುವ ಮತ್ತು ಬರುವ (Onward/Return) ಒಮ್ಮೆಲೆ ಕಾಯ್ದಿರಿಸಿದಲ್ಲಿ ಬರುವ (Return)ಪ್ರಯಾಣಕ್ಕೆ ಶೇ.10 ರಷ್ಟು ವಿಶೇಷ ರಿಯಾಯಿತಿಯನ್ನು ಕಲ್ಪಿಸಲಾಗಿದೆ.
8. ಕರಾರಸಾ ನಿಗಮದ ಸಾರಿಗೆಗಳಲ್ಲಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಜಿ.ಪಿಆರ್‌ಎಸ್ ಸೌಲಭ್ಯವುಳ್ಳ ಮೊಬೈಲ್ ದೂರವಾಣಿ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ಎಂ-ಬುಕಿಂಗ್ ಮತ್ತು ಇ-ಬುಕಿಂಗ್ ವ್ಯವಸ್ಥೆ ಜಾರಿಗೊಳಿಸಿದೆ ಹಾಗೂ ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಆಪ್ ಮೂಲಕ ಮುಂಗಡ ಟಿಕೆಟು ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಸದರಿ ಮುಂಗಡ ಆಸನಗಳನ್ನು ಕಾಯ್ದಿರಿಸಲು ಎಲ್ಲಾ ಡೆಬಿಟ್/ಕ್ರೆಡಿಟ್ ಕಾರ್ಡ್‌ಗಳ ಮೂಲಕ ಹಣ ಪಾವತಿಸಲು ಅವಕಾಶ ಕಲ್ಪಿಸಿದ್ದು, ಈ ಸಂಬಂಧ ತಗಲುವ ಗೇಟ್‌ವೇ ಶುಲ್ಕವನ್ನು ಪ್ರಯಾಣಿಕರಿಂದ ಪಡೆಯುತ್ತಿರುವುದಿಲ್ಲ.
9. ಕೌಂಟರ್‌ಗಳ ಮೂಲಕ ಮುಂಗಡ ಟಿಕೆಟ್ ಕಾಯ್ದಿರಿಸಿರುವ ಟಿಕೆಟ್‌ಗಳಿಗೆ ಪ್ರಯಾಣವನ್ನು ಮುಂದೂಡುವ ಮತ್ತು ಹಿಂದೂಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
10. ಒಂಟಿಯಾಗಿ ಪ್ರಯಾಣ ಮಾಡುವ ಮಹಿಳೆಯರಿಗಾಗಿ, ಮಹಿಳೆಯರು ಮಾತ್ರ ಕಾಯ್ದಿರಿಸಬಹುದಾದ ಆಸನಗಳ ವ್ಯವಸ್ಥೆ ಕಲ್ಪಿಸಲಾಗಿದೆ.
11. ನಿಗಮದ ಸಾರಿಗೆಗಳಲ್ಲಿ ಮುಂಗಡ ಕಾಯ್ದಿರಿಸಿರುವ ಪ್ರಯಾಣಿಕರಿಗೆ ಪ್ರಯಾಣ ವೇಳೆಯ ಎರಡು ಗಂಟೆಯ ಮುಂಚಿತವಾಗಿ ನಗರ ಸಾರಿಗೆಗಳಿರುವ ನಗರಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ.
12. ಮುಂಗಡವಾಗಿ ಸೀಟು ಕಾಯ್ದಿರಿಸುವ ಪ್ರಯಾಣಿಕರಿಗೆ ಅವರುಗಳು ಪ್ರಯಾಣ ಮಾಡುವ ವಾಹನ ಸಂಖ್ಯೆ, ನಿರ್ಗಮನದ ಸಮಯ ಹಾಗೂ ಸದರಿ ವಾಹನದಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಯ ಮೊಬೈಲ್ ಸಂಖ್ಯೆಗಳನ್ನು ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ಒದಗಿಸಲಾಗುತ್ತಿದೆ.

13. ಪ್ರಯಾಣಿಕರ ಅನುಕೂಲಕ್ಕಾಗಿ ಆನ್‌ಲೈನ್ ಅಥವಾ ಮೊಬೈಲ್ ಮೂಲಕ ಟಿಕೆಟನ್ನು ಕಾಯ್ದಿರಿಸಿ, ಎಂ-ಟಿಕೆಟನ್ನು ಲ್ಯಾಪ್‌ಟಾಪ್/ಐಪ್ಯಾಡ್/ಟ್ಯಾಬ್ಲೆಟ್ ಅಥವಾ ಮೊಬೈಲ್ ಫೋನ್‌ನಲ್ಲಿ ತೋರಿಸಿ ಪ್ರಯಾಣಿಸಲು ಅನುವು ಮಾಡಿಕೊಡಲಾಗಿದೆ.
14. ಸಾರ್ವಜನಿಕ ಪ್ರಯಾಣಿಕರು ನಿಲ್ದಾಣವಾರು ವಾಹನಗಳ ನಿರ್ಗಮನಗಳ ಮಾಹಿತಿ ಪಡೆಯಲು ಮೈಸೂರು ನಗರದ ನಗರ ಸಾರಿಗೆ ವಾಹನಗಳಲ್ಲಿ ಐ.ಟಿ.ಎಸ್ (ಇಂಟೆಲಿಜೆಂಟ್ ಟ್ರ್ಯಾನ್ಸ್‌ಪೋರ್ಟ್ ಸಿಸ್ಟಮ್) ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಸದರಿ ವಾಹನಗಳಲ್ಲಿ ಸಾರ್ವಜನಿಕ ಪ್ರಯಾಣಿಕರಿಗೆ ನಿಲ್ದಾಣವಾರು ಘೋಷಣೆಯ ವ್ಯವಸ್ಥೆಯನ್ನು ಅಳವಡಿಸಲಾಗಿದೆ.(ಪ್ಯಾಸೆಂಜರ್ ಅನೌನ್ಸ್‌ಮೆಂಟ್ ಸಿಸ್ಟಮ್).
15. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ನಿಗಮದ ಪ್ರಮುಖ 111 ಬಸ್ ನಿಲ್ದಾಣಗಳಲ್ಲಿ ವಾಹನಗಳ ಸಂಖ್ಯೆ, ನಿರ್ಗಮನದ ವೇಳೆ, ತಲುಪುವ ಸ್ಥಳ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ತಿಳಿಸಲಾಗುತ್ತಿದೆ.
16. ಕ.ರಾ.ರ.ಸಾ.ನಿಗಮದ ವತಿಯಿಂದ ಪ್ರಮುಖ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್‌ಗಳನ್ನು ಆಚರಣೆ ಮಾಡಲಾಗುತ್ತಿದೆ.
17. "ನಮ್ಮ ಕಾರ್ಗೋ" ಟ್ರಕ್ ಸೇವೆಯನ್ನು ದಿನಾಂಕ 23.12.2023 ರಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ವ್ಯಾಪ್ತಿಯಲ್ಲಿ ಜಾರಿಗೆ ತರಲಾಗಿದೆ,
18. ನಿಗಮದ ಖಾಲಿ ನಿವೇಶನಗಳಲ್ಲಿ ಪೆಟ್ರೋಲಿಯಂ ಔಟ್‌ಲೆಟ್‌ಗಳನ್ನು ತೆರೆಯಲು ಸಾರ್ವಜನಿಕ ಸ್ವಾಮ್ಯದ ಆಸಕ್ತ ತೈಲ ಕಂಪನಿಯವರುಗಳಿಂದ ಟೆಂಡರ್ ಮೂಲಕ ಬಿಡ್‌ನ್ನು ಆಹ್ವಾನಿಸಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
19. ಖಾಲಿಯಿರುವ ವಾಣಿಜ್ಯ ಮಳಿಗೆಗಳಿಗೆ ಪರವಾನಗಿದಾರರ ಆಯ್ಕೆ ಪ್ರಕ್ರಿಯೆ ನಿರಂತರವಾಗಿ ಚಾಲ್ತಿಯಲ್ಲಿರುತ್ತದೆ.

## ಆದಾಯ ಹೆಚ್ಚಿಸಲು ಸಂಸ್ಥೆಯಲ್ಲಿ ಕೈಗೊಂಡ ಕ್ರಮಗಳ ವಿವರ

1. ಸಂಸ್ಥೆಯ ವ್ಯಾಪ್ತಿಯಿಂದ ಪಣಜಿ, ಪುಣೆ, ಮುಂಬೈ, ಹೈದ್ರಾಬಾದ, ಕಲಬುರ್ಗಿ, ಬೀದರ, ಬಳ್ಳಾರಿ, ಮೈಸೂರು, ಮಂಗಳೂರು, ಬೆಂಗಳೂರು ಮಾರ್ಗಗಳಲ್ಲಿ ಹಾಗೂ ಹೊಸ ಮಾರ್ಗಗಳಲ್ಲಿ ಪ್ರತಿಷ್ಠಿತ ಸಾರಿಗೆಗಳನ್ನು ಅಳವಡಿಸಿ ಆದಾಯ ಹೆಚ್ಚಿಸಲು ಮೊಬೈಲ್ ಆಪ್ ಮೂಲಕ ಹಾಗೂ ಎಂ-ಬುಕಿಂಗ್, ಇ—ಬುಕಿಂಗ್, ಫ್ರಾಂಚೈಸಿ ಬುಕಿಂಗ್ ಹೆಚ್ಚಿಸಿ, ಹೆಚ್ಚಿನ ಪ್ರಚಾರ ಕೈಗೊಂಡು ಪ್ರೋತ್ಸಾಹಕ ದರ ಮತ್ತು ರಿಯಾಯಿತಿಗಳ ಮಾಹಿತಿಯನ್ನು ಪ್ರಯಾಣಿಕರಿಗೆ ನೀಡಿ ಪ್ರಯಾಣಿಕರನ್ನು ಆಕರ್ಷಿಸುವುದರ ಮೂಲಕ ಆದಾಯ ವೃದ್ಧಿಗೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.
2. ಸಂಸ್ಥೆಗೆ ಆಗುತ್ತಿರುವ ನಷ್ಟವನ್ನು ಸರಿದೂಗಿಸಲು ದರ ಪರಿಷ್ಕರಣೆಗೆ ಸರ್ಕಾರಕ್ಕೆ ಪ್ರಸ್ತಾವನ ಸಲ್ಲಿಸಲಾಗಿದೆ.
3. ಚಾಲನಾ ಸಿಬ್ಬಂದಿಗಳು ಹಾಗೂ ವಾಹನಗಳ ಲಭ್ಯತೆಯನ್ನಾಧರಿಸಿ, ಸುಮಾರು 100 ಅನುಸೂಚಿಗಳನ್ನು ಹುಬ್ಬಳ್ಳಿ, ಧಾರವಾಡ ಹಾಗೂ ಬೆಳಗಾವಿ ನಗರ ವ್ಯಾಪ್ತಿಯಲ್ಲಿ ನೂತನವಾಗಿ ಕಾರ್ಯಾಚರಿಸಲು ಯೋಜಿಸಲಾಗಿದೆ.
4. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರ ಬೇಡಿಕೆ, ಕನಿಷ್ಟ ಸಾರಿಗೆ ಸೌಲಭ್ಯವಿರುವ ಹೋಬಳಿ/ ಗ್ರಾಮಗಳಿಗೆ ಸಮರ್ಪಕ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಯೋಜಿಸಲಾಗಿದೆ.
5. ತಾಲ್ಲೂಕದಿಂದ ತಾಲ್ಲೂಕ ಕೇಂದ್ರಗಳಿಗೆ, ತಾಲ್ಲೂಕ ಕೇಂದ್ರದಿಂದ ಜಿಲ್ಲಾ ಕೇಂದ್ರಗಳಿಗೆ ಹಾಗೂ ಜಿಲ್ಲಾ ಕೇಂದ್ರದಿಂದ ಜಿಲ್ಲಾ ಕೇಂದ್ರಗಳಿಗೆ ಪಾಯಿಂಟ-ಟು-ಪಾಯಿಂಟ ಮಾದರಿಯಲ್ಲಿ ಸಾರಿಗೆ ಕಾರ್ಯಾಚರಣೆಗೆ ಕ್ರಮ ಕೈಗೊಳ್ಳಲಾಗಿದೆ.
6. ಪ್ರಯಾಣಿಕ ಸ್ನೇಹಿಯಾಗಿ ನಗದುರಹಿತ ವಹಿವಾಟನ್ನು ಪ್ರೋತ್ಸಾಹಿಸಲು Prepaid RFID ಕಾರ್ಡ ಬಳಸಿ ಪ್ರಯಾಣಿಸಲು ಬೆಳಗಾವಿ ಹಾಗೂ ಹುಬ್ಬಳ್ಳಿ-ಧಾರವಾಡ ನಗರ ಸಾರಿಗೆಗಳಲ್ಲಿ ಹಾಗೂ ಎಲ್ಲ ವಿಭಾಗಗಳಪ್ರಯಾಣಿಕರನ್ನು ಉತ್ತೇಜಿಸಿ ಆಕರ್ಷಿಸಲು UPI QR Code ಮೂಲಕ ನಗದುರಹಿತ ವಹಿವಾಟನ್ನು ಪ್ರಾರಂಭಿಸಲಾಗಿದೆ ಹಾಗೂ ಸದರಿ ವ್ಯವಸ್ಥೆಯನ್ನು ವಾಣಿಜ್ಯ, ಪಾಸು, ಕರಾರು ಒಪ್ಪಂದಗಳು ಮತ್ತು ಅವತಾರ ಕೌಂಟರ್‌ಗಳಿಗೂ ವಿಸ್ತರಿಸಲಾಗಿದೆ.
7. ಸಂಸ್ಥೆಯಲ್ಲಿ ಚಾಲನಾ ಸಿಬ್ಬಂದಿಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಕಡಿಮೆ ಖರ್ಚಿನಲ್ಲಿ ಉತ್ತಮ ಆದಾಯ ತರುವ ನಿಟ್ಟಿನಲ್ಲಿ ಪ್ರಸ್ತುತ 290 ಅನುಸೂಚಿಗಳನ್ನು ನಿರ್ವಾಹಕರಹಿತ ಸಾರಿಗೆಗಳಾಗಿ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅನುಸೂಚಿಗಳನ್ನು ನಿರ್ವಾಹಕ ರಹಿತ ಸಾರಿಗೆಗಳಾಗಿ ಕಾರ್ಯಾಚರಣೆ ಮಾಡುವ ಮೂಲಕ ಉಳಿದ ಸಿಬ್ಬಂದಿಗಳಿಂದ ಹೆಚ್ಚುವರಿ ಅನುಸೂಚಿಗಳನ್ನು ಕಾರ್ಯಾಚರಣೆಗೆ ಕ್ರಮವಹಿಸಲಾಗುತ್ತಿದೆ.
8. ಕರ್ನಾಟಕ ಮತ್ತು ನೆರೆ ರಾಜ್ಯಗಳಾದ ತೆಲಂಗಾಣ ಹಾಗೂ ಆಂಧ್ರ ಪ್ರದೇಶಗಳೊಂದಿಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಅಲ್ಲದೇ ಮಹಾರಾಷ್ಟ್ರ, ಗೋವಾ ಹಾಗೂ ತಮಿಳುನಾಡು ರಾಜ್ಯಗಳ ಜೊತೆಗೆ ನೂತನ ಪೂರಕ ಅಂತರರಾಜ್ಯ ಸಾರಿಗೆ ಒಪ್ಪಂದಗಳನ್ನು ಮಾಡಿಕೊಳ್ಳುವ ಪ್ರಸ್ತಾವನೆ ಇರುತ್ತದೆ. ಈ ರಾಜ್ಯಗಳ ಜೊತೆ ಒಪ್ಪಂದವಾದ ನಂತರ ಕರ್ನಾಟಕದಿಂದ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಹಾಗೂ ಹೆಚ್ಚು ಸಾರಿಗೆ ಆದಾಯ ಗಳಿಸಲು ಅವಕಾಶವಾಗುವುದು.
9. ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಸಂಸ್ಥೆಯ ಪ್ರಮುಖ 67 ಬಸ್ ನಿಲ್ದಾಣಗಳಲ್ಲಿ ವಾಹನ ಸಂಖ್ಯೆ, ನಿರ್ಗಮನ ವೇಳೆ, ತಲುಪುವ ವೇಳೆ, ಮಾರ್ಗದ ಮಾಹಿತಿಯನ್ನು ಸಾರ್ವಜನಿಕ ಉದ್ಘೋಷಣಾ ವ್ಯವಸ್ಥೆಯ ಮುಖಾಂತರ ನೀಡಲಾಗುತ್ತಿದೆ.
10. ಸಂಸ್ಥೆಯ ಪ್ರಮುಖ ಸ್ಥಳಗಳಿಂದ ಬದಾಮಿ, ಐಹೊಳೆ, ಪಟ್ಟದಕಲ್ಲು, ಕೂಡಲಸಂಗಮ, ಜೋಗ್ ಫಾಲ್ಸ್, ಗೋಕಾಕ್ ಫಾಲ್ಸ್, ಕಪ್ಪತಗುಡ್ಡ ಮುಂತಾದ ಪ್ರವಾಸಿ ತಾಣಗಳಿಗೆ ಪ್ಯಾಕೇಜ್ ಟೂರ್ ವ್ಯವಸ್ಥೆಯನ್ನು ನಿರ್ದಿಷ್ಟ ಮಾಹೆಗಳಲ್ಲಿ ನೀಡಲಾಗುತ್ತಿದೆ.
11. ಇತರೆ ಆದಾಯ ವೃದ್ಧಿಗೆ "ನಮ್ಮ ಕಾರ್ಗೋ" ಪಾರ್ಸೆಲ್ ಸೇವೆಯನ್ನು ಆರಂಭಿಸಲಾಗಿದೆ.
12. ಸಂಸ್ಥೆಯ ಸಾರಿಗೇತರ ಆದಾಯ (ವಾಣಿಜ್ಯ ಆದಾಯ) ಹೆಚ್ಚಿಸಲು, ವಿಶಾಲವಾದ ಖಾಲಿ ನಿವೇಶನ/ಸ್ಥಳ (ಹಳೆಯ ಕಟ್ಟಡಗಳನ್ನೊಳಗೊಂಡಂತೆ) ಗಳನ್ನು ಪರವಾನಿಗೆ ನೀಡಿ ವಾಣಿಜ್ಯ ಆದಾಯ ಹೆಚ್ಚಿಸಲು ಕ್ರಮವಹಿಸಲಾಗಿದೆ.
13. ವಿಶಾಲವಾದ ಖಾಲಿ ನಿವೇಶನ/ಸ್ಥಳಗಳಲ್ಲಿ ಇಂಧನ ಘಟಕಗಳನ್ನು ಆರಂಭಿಸಲು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಬಾಡಿಗೆ ಆಧಾರದ ಮೇಲೆ 6 ಸ್ಥಳಗಳನ್ನು ಟೆಂಡರ್ ಮೂಲಕ ಹಂಚಿಕೆ ಮಾಡಲಾಗಿದ್ದು, ವಾಣಿಜ್ಯ ಆದಾಯ ಹೆಚ್ಚಿಸುವ ಯೋಜನೆ ಜಾರಿಯಲ್ಲಿದೆ.
14. ಬಸ್ಸುಗಳ ಮೇಲೆ ಜಾಹೀರಾತು, ಬಸ್ ನಿಲ್ದಾಣಗಳಲ್ಲಿ ಹೋರ್ಡಿಂಗ್ಸ್ ಅಳವಡಿಕೆ, ಡಿಜಿಟಲ್ ಗ್ಲೋಸೈನ್ ಬೋರ್ಡ್, ವಿಡಿಯೋವಾಲ್ ಅಡ್ವರ್ಟೈಜ್‌ಮೆಂಟ್‌ಗಳ ಮೂಲಕ ಆದಾಯ ಹೆಚ್ಚಳಕ್ಕೆ ಕ್ರಮ ವಹಿಸಲಾಗಿದೆ.
15. ಇದಲ್ಲದೇ, ಮಾನವ ಉತ್ಪಾದಕತೆಗೆ ಅಡ್ಡಿಯಾಗುತ್ತಿದ್ದ ಕೆಲವೊಂದು ವಿಷಯಗಳಲ್ಲಿ ತಂತ್ರಾಂಶಗಳನ್ನು ಅಳವಡಿಸಿ ಮಾನವ ಉತ್ಪಾದಕತೆಯನ್ನು ಹೆಚ್ಚಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ.
   ಉದಾಹರಣೆಗೆ - 1) ಡ್ಯೂಟಿರೋಟಾ 2) ಗಣಕೀಕೃತ ರಜೆ ವ್ಯವಸ್ಥೆ 3) ಸಾರಿಗೆ ಸ್ಪಂದನ ಗಳನ್ನು ಅಳವಡಿಸಲಾಗಿದೆ.
16. ಶಕ್ತಿ ಯೋಜನೆಯ ನಂತರ ಸಾರ್ವಜನಿಕ ಬೇಡಿಕೆ/ಅವಶ್ಯಕತೆಗನುಗುಣವಾಗಿ ಹೆಚ್ಚುವರಿ ಸಾರಿಗೆ ಸೌಲಭ್ಯ ಒದಗಿಸುವ ಕ್ರಮ ನಿರಂತರ ಜಾರಿಯಲ್ಲಿದೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಅನುಬಂಧ-"ಇ"

**ನಿಗಮದ ಆದಾಯವನ್ನು ಹೆಚ್ಚಿಸಲು ಸಂಚಾರ ಇಲಾಖೆಯಿಂದ ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ.**

- ಘಟಕ/ವಿಭಾಗಗಳ ಮಟ್ಟದಲ್ಲಿ ದಿನಂಪ್ರತಿ ಅನುಸೂಚಿವಾರು ಆದಾಯಗಳನ್ನು ಪರಿಶೀಲಿಸಿ, ಕಡಿಮೆ ಆದಾಯ ಬರುವ / ಹೆಚ್ಚಿಗೆ ನಷ್ಟ ಉಂಟು ಮಾಡುವ ಅನುಸೂಚಿಗಳನ್ನು ಪರಿಷ್ಕರಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
- ಡಬಲ್ ಕ್ರ್ಯೂ ಅನುಸೂಚಿಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಣೆ ಮಾಡಲಾಗುತ್ತಿದೆ.
- ಅನಧಿಕೃತವಾಗಿ ಕಾರ್ಯಾಚರಣೆಯಲ್ಲಿರುವ ಜೀಪ್, ಕ್ರೂಜರ್ ಮುಂತಾದ ಖಾಸಗಿ ವಾಹನಗಳ ಕಾರ್ಯಾಚರಣೆ ನಿಯಂತ್ರಿಸಲು ಕ್ರಮ ಜರುಗಿಸುವಂತೆ ಕಾಲಕಾಲಕ್ಕೆ ಸರ್ಕಾರದ ಆಯುಕ್ತರಿಗೆ, ಜಿಲ್ಲಾಧಿಕಾರಿಗಳಿಗೆ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ, ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಕೋರಲಾಗುತ್ತಿದೆ.
- ಖಾಸಗಿ ವಾಹನಗಳಿಂದ ಪೈಪೋಟಿ ಇರುವ ಮಾರ್ಗಗಳಲ್ಲಿ ಪ್ರೋತ್ಸಾಹದಾಯಕ ಪ್ರಯಾಣ ದರಗಳನ್ನು ಜಾರಿಗೊಳಿಸಿ ಪ್ರಯಾಣಿಕರನ್ನು ನಿಗಮದ ಸಾರಿಗೆಗಳಿಗೆ ಆಕರ್ಷಿಸಲು ಕ್ರಮ ಜರುಗಿಸಲಾಗುತ್ತಿದೆ.
- ಉತ್ತಮ ಆದಾಯ ಬರುವ ಮಾರ್ಗಗಳಲ್ಲಿ ಹೊಸ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಕೆಲವು ಆಯ್ದ ಪ್ರಮುಖ ಮಾರ್ಗಗಳಲ್ಲಿ ಎಸಿ ಸ್ಲೀಪರ್ ಹಾಗೂ ನಾನ್ ಎಸಿ ಸ್ಲೀಪರ್ ವಾಹನಗಳನ್ನು ಕಾರ್ಯಾಚರಣೆ ಮಾಡಲು ಯೋಜಿಸಲಾಗಿದೆ.
- ಸಾರಿಗೆ ಆದಾಯ ಸೋರಿಕೆಯಾಗದಂತೆ ಮಾರ್ಗ ತನಿಖಾ ಕಾರ್ಯವನ್ನು ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಲಾಗುತ್ತಿದೆ.
- ಅನುಸೂಚಿಗಳಿಗೆ ಆದಾಯದ ಗುರಿಯನ್ನು ನಿಗದಿಪಡಿಸಿ, ಅದರಂತೆ ಆದಾಯವನ್ನು ಸಂದಾಯವಾಗುವಂತೆ ಸಂಬಂಧಪಟ್ಟ ಸಿಬ್ಬಂದಿಗಳಿಗೆ ತಿಳುವಳಿಕೆ ನೀಡಿ ಆದಾಯ ಹೆಚ್ಚಿಸಲು ಕ್ರಮ ಜರುಗಿಸಲಾಗುತ್ತಿದೆ.
- ವಿಭಾಗ ಮಟ್ಟದಲ್ಲಿ ಭೌತಿಕ ಮತ್ತು ಆರ್ಥಿಕ ಕಾರ್ಯಾಚರಣೆ ಕುರಿತಂತೆ ಘಟಕ ವ್ಯವಸ್ಥಾಪಕರ ಮತ್ತು ಶಾಖಾ ಮುಖ್ಯಸ್ಥರ ವಾರಾಂತ್ಯ ಮತ್ತು ಮಾಸಾಂತ್ಯ ಸಭೆ ನಡೆಸಿ, ಸಾರಿಗೆ ಆದಾಯ ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಖಾಲಿ ಇರುವ ಮಳಿಗೆಗಳಿಗೆ ಟೆಂಡರ್ ಪ್ರಕ್ರಿಯೆ ಸರಳೀಕರಣಗೊಳಿಸಿ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಈ ಹಿಂದೆ ನಮ್ಮ ಕಾರ್ಗೋ ಅನ್ನು ಪ್ರಾರಂಭಿಸಿ, ಪಾರ್ಸಲ್ & ಕೋರಿಯರ್ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಇದರಿಂದ ನಿಗಮದ ಆದಾಯವನ್ನು ಹೆಚ್ಚಿಸಲು ಕ್ರಮವಹಿಸಲಾಗಿರುತ್ತದೆ.
- ಜಾಹೀರಾತು ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಶಾಲಾ-ಕಾಲೇಜು ಮತ್ತು ಕಾರ್ಖಾನೆಗಳ ಮುಖ್ಯಸ್ಥರಿಗೆ ಪತ್ರ ಬರೆದು ಚಾರ್ಟರ್ಡ್ ಸರ್ವಿಸ್ ಪಡೆದುಕೊಳ್ಳಲು ಕ್ರಮ ಜರುಗಿಸಲಾಗಿರುತ್ತದೆ.
- ನಿಗಮದ ತೆರೆದ ನಿವೇಶನಗಳಲ್ಲಿ ಬಾಡಿಗೆ ಆಧಾರದ ಮೇಲೆ ಇಂಧನ ಬಂಕ ಅಳವಡಿಸಿ ವಾಣಿಜ್ಯ ಆದಾಯ ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ತನಿಖಾ ತಂಡಗಳನ್ನು ನಿಯೋಜಿಸಿ, ಪ್ರಯಾಣಿಕರು ಟಿಕೇಟ್ ಪಡೆದಿರುವ ಬಗ್ಗೆ ನಿಯಮಿತವಾಗಿ ತನಿಖೆ ನಡೆಸುವ ಮೂಲಕ ಪ್ರಯಾಣಿಕರಲ್ಲಿ ಜಾಗೃತಿ ಮೂಡಿಸಿ ಎಲ್ಲಾ ಪ್ರಯಾಣಿಕರು ಟಿಕೇಟ್ ಪಡೆದು ಪ್ರಯಾಣಿಸುವ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಕೇಂದ್ರ ಕಛೇರಿಯ ಮಟ್ಟದಲ್ಲಿ ವಿಭಾಗಗಳ ಕಾರ್ಯಾಚರಣೆಯ ಅಂಕಿ-ಅಂಶಗಳನ್ನು ಪರಿಶೀಲಿಸಿ, ಆದಾಯ ಹೆಚ್ಚಿಸಲು ವಿಭಾಗಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಸಮನಾಂತರ ಕಾರ್ಯಾಚರಣೆ ಯನ್ನು ಅಭ್ಯಸಿಸಿ, ಅನುಸೂಚಿಗಳನ್ನು ಪರಿಷ್ಕರಿಸಲು ಆಯಾ ವಿಭಾಗದವರಿಗೆ ಮಾರ್ಗದರ್ಶನ ನೀಡಲಾಗುತ್ತಿದೆ.
- ಕೇಂದ್ರ ಕಛೇರಿ ಮಟ್ಟದಲ್ಲಿ ನಡೆಯುವ ಇಲಾಖಾ ಮುಖ್ಯಸ್ಥರ/ವಿಭಾಗೀಯ ನಿಯಂತ್ರಣಾಧಿಕಾರಿ ಗಳ/ವಿಭಾಗೀಯ ಸಂಚಾರ ಅಧಿಕಾರಿಗಳ ಸಭೆಯನ್ನು ಕಾಲಕಾಲಕ್ಕೆ ನಿಗಧಿ ಮಾಡಿ ಅಲ್ಲಿ ಅನುಸೂಚಿಗಳ ಬಗ್ಗೆ ವಿಶ್ಲೇಷಣೆ ಮಾಡಿ ಇತ್ಯಾಧಿಗಳ ಬಗ್ಗೆ ಪರಿಶೀಲಿಸಿ, ಅಗತ್ಯ ಸುಧಾರಣಾ ಕ್ರಮ ಕೈಗೊಳ್ಳುವಂತೆ ವಿಭಾಗೀಯ ಅಧಿಕಾರಿಗಳಿಗೆ ಸೂಕ್ತ ಸಲಹೆ ನೀಡಿ, ಸಾರಿಗೆ ಆದಾಯ ಹೆಚ್ಚಿಸುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

| ವಾಕರಸಾ ಸಂಸ್ಥೆ, ನಮ್ಮ ಕಾರ್ಗೋ ಕೌಂಟರ್ ವಿವರ | | |
|---|---|---|
| ಕ್ರ.ಸಂ | ವಿಭಾಗ | ಬಸ್ ನಿಲ್ದಾಣ |
| 1 | ಹುಬ್ಬಳ್ಳಿ | ಹುಬ್ಬಳ್ಳಿ ಹೊಸ ಬಸ್ ನಿಲ್ದಾಣ |
| 2 | | ಹುಬ್ಬಳ್ಳಿ ಹೊಸುರ ಬಸ್ ನಿಲ್ದಾಣ |
| 3 | ಧಾರವಾಡ | ಧಾರವಾಡ ಹೊಸ ಬಸ್ ನಿಲ್ದಾಣ |
| 4 | | ಧಾರವಾಡ ಹಳೇ ಬಸ್ ನಿಲ್ದಾಣ |
| 5 | | ದಾಂಡೇಲಿ |
| 6 | ಗದಗ | ಗದಗ |
| 7 | | ಲಕ್ಷ್ಮೇಶ್ವರ |
| 8 | | ಮುಂಡರಗಿ |
| 9 | | ಗಜೇಂದ್ರಗಡ |
| 10 | ಉತ್ತರ ಕನ್ನಡ | ಶಿರಸಿ |
| 11 | | ಕುಮಟಾ |
| 12 | | ಕಾರವಾರ |
| 13 | | ಭಟ್ಕಳ |
| 14 | | ಅಂಕೋಲಾ |
| 15 | | ಸಿದ್ದಾಪುರ |
| 16 | | ಯಲ್ಲಾಪುರ |
| 17 | | ಮೂಡಲಗಿ |
| 18 | | ಹೊನ್ನಾವರ |
| 19 | ಹಾವೇರಿ | ಹಾವೇರಿ |
| 20 | | ರಾಣೆಬೆನ್ನೂರ |
| 21 | | ಹಾನಗಲ್ |
| 22 | | ಸವಣೂರು |
| 23 | | ಹಿರೇಕರೂರು |
| 24 | ಬೆಳಗಾವಿ | ಬೆಳಗಾವಿ |
| 25 | | ರಾಮದುರ್ಗ |
| 26 | ಬಾಗಲಕೋಟೆ | ಬಾಗಲಕೋಟೆ |
| 27 | | ಇಲಕಲ್ |
| 28 | | ಬದಾಮಿ |
| 29 | | ಮುದೋಳ |
| 30 | | ಜಮಖಂಡಿ |
| 31 | | ನವನಗರ |
| 32 | | ಬನಹಟ್ಟಿ |
| 33 | | ಲೋಕಾಪುರ |
| 34 | | ಬೀಳಗಿ |
| 35 | | ಗುಳೇದಗುಡ್ಡ |
| 36 | ಚಿಕ್ಕೋಡಿ | ಚಿಕ್ಕೋಡಿ |
| 37 | | ನಿಪ್ಪಾಣಿ |
| 38 | | ಸಂಕೇಶ್ವರ |
| 39 | | ಗೋಕಾಕ |
| 40 | | ಅಥಣಿ |

| ಕಕರಸಾ ನಿಗಮದ ನಮ್ಮ ಕಾರ್ಗೋ ಕೌಂಟರ್‌ಗಳ ಪಟ್ಟಿ | | |
|---|---|---|
| ಕ್ರ.ಸಂ | ಸ್ಥಳ | ಕಾರ್ಗೋ ಕೌಂಟರ್‌ಗಳು |
| 1 | ಬಸವ ಕಲ್ಯಾಣ | 1 |
| 2 | ಬೀದರ್ | 1 |
| 3 | ಹೈದರಾಬಾದ್ | 1 |
| 4 | ಬಳ್ಳಾರಿ | 2 |
| 5 | ಸಿರಗುಪ್ಪಾ | 1 |
| 6 | ಹೊಸಪೇಟೆ | 1 |
| 7 | ಸೇಡಂ | 1 |
| 8 | ಕಲಬುರಗಿ | 1 |
| 9 | ಗಂಗಾವತಿ | 1 |
| 10 | ಕೊಪ್ಪಳ | 1 |
| 11 | ಕುಷ್ಠಗಿ | 1 |
| 12 | ದೇವದುರ್ಗ | 1 |
| 13 | ಲಿಂಗಸಗೂರು | 1 |
| 14 | ಮಂತ್ರಾಲಯ | 1 |
| 15 | ರಾಯಚೂರು | 1 |
| 16 | ಸಿಂಧನೂರು | 1 |
| 17 | ಇಂಡಿ | 1 |
| 18 | ಸೊಲ್ಲಾಪೂರ್ | 1 |
| 19 | ಮುದ್ದೇಬಿಹಾಳ | 1 |
| 20 | ಸಿಂಧಗಿ | 1 |
| 21 | ವಿಜಯಪುರ | 1 |
| 22 | ಶಾಹಪೂರ | 1 |
| 23 | ಸುರಪೂರ | 1 |
| 24 | ಯಾದಗಿರಿ | 1 |
| 25 | ನಾಂದೇಡ | 1 |
| 26 | ಕಂಪ್ಲಿ | 1 |
| 27 | ಆಧೋನಿ | 1 |
| 28 | ಮಾನವಿ | 1 |
| 29 | ಗುರಮಿಠಕಲ್ | 1 |
| 30 | ಹುಣಸಗಿ | 1 |
| 31 | ಹಗರಿಬೊಮ್ಮನಹಳ್ಳಿ | 1 |
| 32 | ತೆಕ್ಕಲಕೋಟೆ | 1 |
| | | **33** |